<u>ಇಂದು ದಿಃ **27-03-2023** ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಆರ್.ಎಂ.ಕೆ ವಕೀಲರಿಂದ:**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾವು 5 ಜನ ಸಹೋದರರು ಇದ್ದೇವೆ. ನಾವೆಲ್ಲರೂ 18 ವರ್ಷಗಳ ಹಿಂದೆ ನಮ್ಮ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದೇವೆ. ವಿಭಾಗ ಮಾಡಿಕೊಂಡ ಬಗ್ಗೆ ನನ್ನ ಹತ್ತಿರ ದಾಖಲೆಗಳು ಇರುವುದಿಲ್ಲ. ನಮ್ಮ ಸಹೋದರರೆಲ್ಲರೂ ಬೇರೆ ಬೇರೆಯಾಗಿ ವಾಸವಾಗಿದ್ದೇವೆ. ನನ್ನ ಹೆಸರಿಗೆ ಯಾವುದೇ ಜಮೀನು ಇರುವುದಿಲ್ಲ, ಆದರೆ ಉಳುಮೆ ಮಾಡಲು ಕೊಟ್ಟಿರುತ್ತಾರೆ. ನನಗೆ ಉಳುಮೆ ಮಾಡಲು ಕೊಟ್ಟ ಜಮೀನು ನಮ್ಮ ತಾಯಿಯ ಹೆಸರಿನಲ್ಲಿದೆ. ನಮ್ಮ ತಂದೆ ಮೃತಪಟ್ಟ ನಂತರ ನಮ್ಮ ತಾಯಿಯ ಹೆಸರಿಗೆ ಬಂದಿದೆ. ನಮ್ಮ ತಾಯಿಯ ಹೆಸರಿನಲ್ಲಿರುವ ಆಸ್ತಿಗಳ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನಗೆ 2 ಎಕರೆ ಜಮೀನಿಂದ ವರ್ಷಕ್ಕೆ 1 ರಿಂದ 2 ಲಕ್ಷ ರೂಪಾಯಿ ಆಧಾಯ ಬರುತ್ತದೆ. ಬೇರೆ ಜಮೀನುಗಳನ್ನು ಸಹ ನಾನು ಸಾಗುವಳಿ ಮಾಡುತ್ತೇನೆ. ನಾನು, ಎಸ್.ಬಿ.ಐ ಮತ್ತು ಪಿ.ಎಲ್.ಡಿ ಬ್ಯಾಂಕಗಳಲ್ಲಿ ಖಾತೆ ಹೊಂದಿ ವ್ಯವಹರಿಸುತ್ತೇನೆ. ನಾನು ನನ್ನ ಬ್ಯಾಂಕ್ ಖಾತೆಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಬೇರೆ ಬೇರೆಯವರ ಜಮೀನುಗಳನ್ನು ಲಾವಣಿ ಹಾಕಿಕೊಂಡು ಸಾಗುವಳಿ ಮಾಡುತ್ತೇನೆ. 2014 ರಲ್ಲಿ ಬಿ.ಹೆಚ್ ರಾಮಪ್ಪ ರೆಡ್ಡಿ ಎನ್ನುವರ ಜಮೀನನ್ನು ಸಾಗುವಳಿ ಮಾಡುತ್ತಿದ್ದೆನು. ಮಾಳಮ್ಮನವರ ಜಗದೀಶ್ ಎನ್ನುವವರ 2 ಎಕರೆ ಜಮೀನನ್ನು ಲಾವಣಿ ಮಾಡುತ್ತಿದ್ದೆನು. ಲಾವಣಿ ಮಾಡಿಕೊಂಡಿದ್ದೆ ಎಂದು ತೋರಿಸಲು ನನ್ನ ಹತ್ತಿರ ದಾಖಲೆಗಳಿವೆ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೀರ ಎಂದರೆ ಸಾಕ್ಷಿಯು, ಲಾವಣಿ ಅವಧಿ ಮುಗಿದ ನಂತರ ಮಾಲೀಕರು ದಾಖಲೆಗಳನ್ನು ಮರಳಿ ಪಡೆದುಕೊಂಡಿರುತ್ತಾರೆ. ಜಮೀನಿನ ಮಾಲೀಕರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ಸಾಕ್ಷಿ ಮಾಡಿಸುತ್ತೇನೆ. ಬೇರೆಯವರ ಜಮೀನುಗಳನ್ನು ಲಾವಣಿ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಊರಿಗೂ ನಂದಿತಾವರೆ ಕ್ಯಾಂಪ್ ಗೂ 4 ಕೀ.ಮೀ ಹಂತರ ಇದೆ. ನಾನು ಜಿಗಳಿ ಕ್ಯಾಂಪ್ ನಲ್ಲಿ ವಾಸವಾಗಿದ್ದೇನೆ. ಜಿಗಳಿ ಕ್ಯಾಂಪ್ ಗೂ ಬಾನುವಳ್ಳಿಗೂ 4 ಕೀ.ಮೀ ಹಂತರ ಇದೆ. ಜಿಗಳಿ ಕ್ಯಾಂಪ್ ಗೂ ವಿನಾಯಕನಗರ ಕ್ಯಾಂಪ್ ಗೆ ಎಷ್ಟು ಹಂತರ ಇದೆ ಎಂದರೆ ಸಾಕ್ಷಿಯು, ಎರಡೂ ಒಂದೇ ಇರುತ್ತದೆಂದು ಉತ್ತರಿಸುತ್ತಾರೆ. ದಾವಾ ಹಾಕುವ ಕಾಲಕ್ಕೆ ನಾನು ವಾಸವಾಗಿರುವ ಸ್ಥಳಕ್ಕೆ ಜಿಗಳಿ ಕ್ಯಾಂಪ್ ಎಂದು ಕರೆಯುತ್ತಿದ್ದರು. ನಮ್ಮ ವಕೀಲರಿಗೆ ದಾವಾ ಹಾಕುವ ಕಾಲಕ್ಕೆ ಜಿಗಳಿ ಕ್ಯಾಂಪ್ ಮತ್ತು ವಿನಾಯಕ ನಗರ ಕ್ಯಾಂಪ್ ಎರಡೂ ಒಂದೇ ಎಂದು ಮಾಹಿತಿ ಕೊಟ್ಟಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.